O.S .No. 21/2019
PW-1

ದಿನಾಂಕ: 11-10-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಬಿ.ಎಸ್.ವೈ. ವಕೀಲರಿಂದಃ

ನಿಮಗೆ ಕನ್ನಡ ಓದಲು, ಬರೆಯಲು ಬರುತ್ತದೆಯೇ ಎಂದರೆ ಸಾಕ್ಷಿ ಓದಲು ಬರುವುದಿಲ್ಲ, ನನ್ನ ಹೆಸರು ಬರೆಯುತ್ತೇನೆ ಎಂದು ಹೇಳುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ವಿಚಾರ ಗೊತ್ತಿಲ್ಲ. ವಾದ ಪತ್ರದಲ್ಲಿ ಬರೆದಿರುವ ವಿಚಾರ ಗೊತ್ತು. ದಾವಾ ಆಸ್ತಿಯನ್ನು 1969 ರಲ್ಲಿ ಕ್ರಯಕ್ಕೆ ಪಡೆದಿರುತ್ತೇನೆ. ನಿಮ್ಮ ತಿದ್ದುಪಡಿ ವಾದ ಪತ್ರದಲ್ಲೂ ದಾವಾ ಆಸ್ತಿಯನ್ನು 1969 ರಲ್ಲಿ ಖರೀದಿಸಿರುತ್ತೇನೆಂದು ಬರೆಸಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಸಾಕ್ಷಿಗೆ ತಿದ್ದುಪಡಿ ವಾದ ಪತ್ರದ 2 ನೇ ಪುಟದ, 2 ನೇ ಪಂತಿ, 4 ನೇ ಸಾಲನ್ನು ತೋರಿಸಿ ಯಾವ ವರ್ಷವೆಂದು ನಮೂದು ಇದೆ ಎಂದರೆ ಸಾಕ್ಷಿ 1976 ಎಂದು ನಮೂದು ಇದೆ ಎಂದು ಹೇಳುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಖರೀದಿ ಮಾಡಿದ ವರ್ಷ ಬೇರೆ ಬರೆಸಿದ್ದು ಹಾಗೂ ತಿದ್ದುಪಡಿ ವಾದ ಪತ್ರದಲ್ಲಿ ಖರೀದಿ ಮಾಡಿದ ವರ್ಷ ಬೇರೆ ಬರೆಸಿದ್ದು, ನಿಖರವಾಗಿ ನಿಮಗೆ ಯಾವ ವರ್ಷ ಎಂದು ಗೊತ್ತಿಲ್ಲ ಎಂದರೆ ಸರಿ.

ನಿಮ್ಮ ಜನ್ಮ ದಿನಾಂಕ ಗೊತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಎಷ್ಟು ವರ್ಷ ನಿಮಗೆ ಎಂದರೆ ಸಾಕ್ಷಿ 45 ವರ್ಷ ಎಂದು ಹೇಳುತ್ತಾರೆ. ವಾದ ಪತ್ರ ಹಾಗೂ ಪ್ರಮಾಣ ಪತ್ರದಲ್ಲಿ ಬರೆಸಿರುವ ವರ್ಷ, ನಿಮ್ಮ ಜನನ ವರ್ಷಕ್ಕಿಂತ ಹಿಂದಿನದ್ದಾಗಿರುವುದರಿಂದ ಆಗ ನೀವು ಹುಟ್ಟಿರಲಿಲ್ಲ ಎಂದರೆ ಸರಿ. ನಿಪಿ-1 ರಂತೆ ಕ್ರಯ ಪತ್ರವನ್ನು ಯಾರು ಬರೆದುಕೊಟ್ಟರು, ಅದಕ್ಕೆ ಯಾರು ಸಹಿ ಹಾಕಿದ್ದಾರೆ, ಅದಕ್ಕೆ ಯಾರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆಂದು ನಿಮಗೆ ಗೊತ್ತಿಲ್ಲ ಎಂದರೆ ಸರಿ. ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ 36 ವರ್ಷ ಎಂದು ಬರೆಸಿದ್ದು, ನೀವು ಹೇಳಿದಂತೆ ನಿಮ್ಮ ವಯಸ್ಸು 45 ವರ್ಷ ಸರಿಯೋ ಅಥವಾ 36 ವರ್ಷ ಸರಿಯೋ ಎಂದರೆ ಸಾಕ್ಷಿ 45 ಎಂದು ಹೇಳುತ್ತಾರೆ. ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಿಮ್ಮ ವಯಸ್ಸನ್ನು 36 ವರ್ಷ ಎಂದು ನಮೂದಿಸಿರುವುದು ಸುಳ್ಳು ಎಂದರೆ ಸರಿ.

ದಾವಾ ಹಾಕುವ ಕಾಲಕ್ಕೆ ದಾವಾ ಆಸ್ತಿ ಯಾರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿ ಚಿಕ್ಕತಮ್ಮನಾಯಕ, ಲಕ್ಷಣನಾಯಕ, ದೊಡ್ಡತಮ್ಮನಾಯಕ ಮತ್ತು ಕಾಂತನಾಯಕ ರವರ ಹೆಸರಿನಲ್ಲಿತ್ತು ಎಂದು ಹೇಳುತ್ತಾರೆ. ದಾವಾ ಆಸ್ತಿ 1 ಎಕರೆ 27 ಗುಂಟೆ ಯಾರ್ಯಾರ ಹೆಸರಿನಲ್ಲಿ, ಎಷ್ಟೆಷ್ಟು ಇದೆ ಎಂದರೆ ಸಾಕ್ಷಿ ಅದು ಭಾಗ ಮಾಡಿಲ್ಲ ಎಂದು ಹೇಳುತ್ತಾರೆ. ದಾವಾ ಹಾಕುವ ಕಾಲಕ್ಕೆ ದಾವಾ ಆಸ್ತಿ ಚಿಕ್ಕತಮ್ಮನಾಯಕ, ಲಕ್ಷಣನಾಯಕ, ದೊಡ್ಡತಮ್ಮನಾಯಕ ಮತ್ತು ಕಾಂತನಾಯಕ ರವರ ಹೆಸರಿನಲ್ಲಿತ್ತು ಎಂದು ತೋರಿಸಲು ದಾಖಲಾತಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟಿದ್ದೇನೆ ಎಂದು ಹೇಳುತ್ತಾರೆ. ನಿಪಿ-12 ರಂತೆ ದಾವಾ ಆಸ್ತಿ ಪ್ರತಿವಾದಿಗಳ ಹೆಸರಿಗೆ 1995-96 ರಲ್ಲಿ ನಮೂದಿಸಲಾಗಿದೆ ಎಂದರೆ ಸರಿ. ಪ್ರತಿವಾದಿಗಳ ಹೆಸರಿನಲ್ಲಿ ಖಾತೆಯಾದ ಬಗ್ಗೆ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಪ್ರತಿವಾದಿಗಳ ಹೆಸರಿಗೆ ಆದ ಖಾತೆಯನ್ನು ಪ್ರಶ್ನಿಸುವ ವ್ಯಾಪ್ತಿ ಉಪವಿಭಾಗಾಧಿಕಾರಿ ರವರ ಸಕ್ಷಮ ಪ್ರಾಧಿಕಾರದಲ್ಲಿದ್ದು, ಈ ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲ ಎಂದರೆ ಸಾಕ್ಷಿ ಗೊತ್ತಾಗಲಿಲ್ಲ ಎಂದು ಹೇಳುತ್ತಾರೆ. ನಿಮ್ಮ ಪರವಾಗಿ ನ್ಯಾಯಾಲಯದಲ್ಲಿ ಸಾಕ್ಷ್ಯ ಹೇಳುವವರು ಇದ್ದಾರಾ ಎಂದರೆ ಸಾಕ್ಷಿ ಇದ್ದಾರೆ ಎಂದು ಹೇಳುತ್ತಾರೆ.

ದಾವಾ ಆಸ್ತಿಯಲ್ಲಿ ನೀವು ಸ್ವಾಧೀನ ಇಲ್ಲ, ಪ್ರತಿವಾದಿಗಳೇ ಸ್ವಾಧೀನದಲ್ಲಿದ್ದು, ಬಲವಂತವಾಗಿ ನೀವು ಹಾಗೂ ನಿಮ್ಮ ಸಮಾಜದವರು ಅವರಿಂದ ಸ್ವಾಧೀನ ಕಿತ್ತುಕೊಳ್ಳಲು ಪ್ರಯತ್ನಿಸಿದ್ದೀರಿ ಎಂದರೆ ಸರಿಯಲ್ಲ. ಊರಿನಲ್ಲಿ ನ್ಯಾಯ ಪಂಚಾಯಿತಿ ಯಾವತ್ತು ಸೇರಿಸಲಾಗಿತ್ತು, ಯಾರ್ಯಾರು ಹಾಜರಿದ್ದರು ಎಂದರೆ ಸಾಕ್ಷಿ ಊರಿನ ಗ್ರಾಮಸ್ತರೆಲ್ಲರೂ ಸೇರಿದ್ದು, 10 ಬಾರಿ ಆಗಿದೆ ಎಂದು ಹೇಳುತ್ತಾರೆ. 10 ಬಾರಿ ನ್ಯಾಯ ಪಂಚಾಯಿತಿ ಯಾದ ಕಾಲದ ದಿನಾಂಕ, ತಿಂಗಳು, ವರ್ಷ ನೆನಪಿದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ದಾವೆ ಹೂಡುವ ಎಷ್ಟು ದಿನಗಳ ಹಿಂದೆ ನ್ಯಾಯ ಪಂಚಾಯಿತಿ ಮಾಡಲಾಗಿತ್ತು ಎಂದರೆ ಸಾಕ್ಷಿ ಈಗ್ಗೆ 5 ವರ್ಷಗಳ ಹಿಂದೆ ಎಂದು ಹೇಳುತ್ತಾರೆ. ಊರಿನಲ್ಲಿ ಯಾವುದೇ ನ್ಯಾಯ ಪಂಚಾಯಿತಿ ಆಗಿಲ್ಲದೇ ಇದ್ದರೂ, ಆಗಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವೆ ಹೂಡಿದ ನಂತರ ಊರಿನಲ್ಲಿ ನ್ಯಾಯ ಪಂಚಾಯಿತಿ ಮಾಡಲಾಗಿತ್ತು ಎಂದರೆ ಸರಿ. ನ್ಯಾಯ ಪಂಚಾಯಿತಿಯಲ್ಲಿ ಪ್ರತಿವಾದಿಗಳಿಗೆ ಸ್ವಾಧೀನ ಬಿಟ್ಟು ಕೊಡುವಂತೆ ಒತ್ತಡ ಮಾಡಲಾಗಿತ್ತು ಎಂದರೆ ಸರಿಯಲ್ಲ. ಪ್ರತಿವಾದಿಗಳು ನ್ಯಾಯಾಲಯದಲ್ಲಿ ಬಾಕಿ ಇರುವುದರಿಂದ ರಾಜಿ ಪಂಚಾಯಿತಿಗೆ ಒಪ್ಪದೇ ಇದ್ದುದ್ದರಿಂದ

ನೀವು ಹಾಗೂ ಗ್ರಾಮಸ್ಥರು ಪ್ರತಿವಾದಿಗಳಿಗೆ ಗ್ರಾಮದಲ್ಲಿ ಬಹಿಷ್ಕರಿಸುವುದಾಗಿ ಬೆದರಿಕೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಅವರು ಒಪ್ಪದೇ ಇದ್ದುದ್ದಕ್ಕೆ ಹೇಳಿದ್ದು ಎಂದು ಹೇಳುತ್ತಾರೆ. ಪ್ರತಿವಾದಿಗಳ ವಿರುದ್ಧ ಬಹಿಷ್ಕಾರ ಮಾಡಿದ್ದರಿಂದ, ಪ್ರತಿವಾದಿಗಳು ಪೊಲೀಸ ವರಿಷ್ಟರಿಗೆ ಹಾಗೂ ಇತರರಿಗೆ ದೂರು ನೀಡಿದ್ದರಿಂದ ನೀವು ಹಾಗೂ ಗ್ರಾಮಸ್ತರು ಬಹಿಷ್ಕಾರ ವಾಪಸ್ಸು ಪಡೆದಿರುತ್ತೀರಿ ಎಂದರೆ ಸರಿ. ದಾವಾ ಆಸ್ತಿಯ ಸ್ವಾಧೀನದಲ್ಲಿ ಪ್ರತಿವಾದಿಗಳು ಇದ್ದು, ಅವರಿಗೆ ಬೆದರಿಸಿ ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಈ ದಾವೆ ಹೂಡಿರುತ್ತೀರಿ ಎಂದರೆ ಸರಿಯಲ್ಲ. ನಿಪಿ-1 ನ್ನು ಯಾರು, ಯಾವಾಗ, ಯಾರಿಗೆ ಬರೆದುಕೊಟ್ಟರು ಎಂದು ನಿಮಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ-2 ರಿಂದ 17 ರಲ್ಲಿ ಪ್ರತಿವಾದಿಗಳ ತಾತನ ಹೆಸರು ಇದೆ ಎಂದರೆ ಸರಿ. ನಿಪಿ-2 ರಿಂದ 17 ದಾಖಲಾತಿಗಳು ಪ್ರತಿವಾದಿಗಳಿಗೆ ಸಂಬಂಧಿಸಿದ್ದು ಎಂದರೆ ಸರಿ. ದಾವಾ ಆಸ್ತಿ ನಿಮಗೆ ಸೇರಿದ್ದು ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನೊಂದಣಿ ಪತ್ರ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ನಿಪಿ-1 ದಾವಾ ಆಸ್ತಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿ. ದಾವಾ ಆಸ್ತಿ ನಿಮಗೆ ಸೇರಿದ್ದು ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸದೇ ಇರುವುದರಿಂದ, ನೀವು ಕೇಳಿದ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ. ನೀವು ಹಾಗೂ ನಿಮ್ಮ ಗ್ರಾಮಸ್ತರೆಲ್ಲ ಸೇರಿ ಪ್ರತಿವಾದಿಗಳಿಂದ ದಾವಾ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಗಳ ವಿರುದ್ಧ ಪಿರ್ಯಾದು ದಾಖಲಿಸಿ, ನೀವೇ ಪ್ರತಿವಾದಿಗಳಿಗೆ ತೊಂದರೆ ಕೊಡುತ್ತಿದ್ದು, ನಿಪಿ-14 ನ್ನು ದಾವೆಗೋಸ್ಕರ ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನೀವು ಸ್ವಾಧೀನ ಇಲ್ಲ, ಪ್ರತಿವಾದಿಗಳ ಸ್ವಾಧೀನ ಕಸಿದುಕೊಳ್ಳಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.